Volume-3, Issue-11, Nov-2014 • ISSN No 2277 - 8160

Research Paper | Kannada

# WOMEN EMPOWERMENT AND POOJYA DR.SHARANABASAWAPPA APPA

## ಮಹಿಳಾ ಸಬಲೀಕರಣ ಮತ್ತು ಪೂಜ್ಯ ಡಾ. ಶರಣಬಸವಪ್ಪ ಅಪ್ಪ

**Dr.(Mrs.) NEELAMBIKA POLICEPATIL**

Principal & Research Guide, Godutai Doddappa Appa Arts & Commerce Degree College For Women, Gulbarga, Karnatak -585103.

ಮಹಿಳಾ ಸಬಲೀಕರಣ ಎಂಬುದು ಸ್ತ್ರೀಯರ ಸಮಗ್ರ ವ್ಯಕ್ತಿತ್ವವನ್ನು ಉನ್ನತಿಗೊಳಿಸುವದೇ ಆಗಿದೆ. ಶತಶತಮಾನಗಳಿಂದ ಶೋಷಣೆಗೆ ಒಳಗಾಗಿ ಅಬಲೆ ಎಂಬ ಹಣೆಪಟ್ಟಿಯನ್ನು ಧರಿಸಿಕೊಂಡು ಅಮಾನವೀಯ ರೀತಿಯಲ್ಲಿ ಬದುಕುತ್ತಿದ್ದ ಮಹಿಳೆಯನ್ನು ಸಬಲಗೊಳಿಸುವ ಉದ್ದೇಶ ಇದರಲ್ಲಿ ಅಡಗಿದೆ. ಮನೆ, ಸಮಾಜ, ಸಾರ್ವಜನಿಕ ಕ್ಷೇತ್ರಗಳಲೆಲ್ಲಾ ಅವಳ ಗೌರವನ್ನು ಹೆಚ್ಚಿಸಿ, ಅವಳಲ್ಲಿ, ಸ್ವಾಭಿಮಾನ ತುಂಬುತ್ತಾ, ಅವಳಿಗೆ ಶೈಕ್ಷಣಿಕ ಸ್ವಾತಂತ್ರ್ಯ ಆರ್ಥಿಕ ಸುಭದ್ರತೆ, ಸಾಮಾಜಿಕ ಸ್ಥಾನಮಾನ ಮುಂತಾದವುಗಳು ಅವಳಿಗೆ ದಕ್ಕಬೇಕು ಎಂಬುದೆ ಮಹಿಳಾ ಸಬಲೀಕರಣದ ಮುಖ್ಯ ಧ್ವನಿಯಾಗಿದೆ.

ದೇಶದಾದ್ಯಂತ ಅನೇಕ ಸಂಘ ಸಂಸ್ಥೆಗಳು ಅನೇಕ ವರ್ಷಗಳಿಂದ ಮಹಿಳೆಯರ ಸಮಾಜೋ ಆರ್ಥಿಕ ಶೈಕ್ಷಣಿಕ ಬೆಳವಣಿಗೆಯತ್ತ ಪ್ರಯತ್ನಿಸುತ್ತಿವೆ. ಅವುಗಳಲ್ಲಿ ಕಲಬುರಗಿಯ ಶರಣಬಸವೇಶ್ವರ ವಿದ್ಯಾವರ್ಧಕ ಸಂಘವಂತು ಮಹಿಳಾ ಸಬಲೀಕರಣಕ್ಕೆ ಒಂದು ಅತ್ಯುತ್ತಮ ನಿದರ್ಶನವಾಗಿದೆ. 1903ರಲ್ಲಿ ಸ್ಥಾಪನೆಗೊಂಡ ಈ ಸಂಸ್ಥೆಯು ಪುರುಷರಂತೆ ಮಹಿಳೆಯರ ಶಿಕ್ಷಣಕ್ಕೂ ಹೆಚ್ಚಿನ ಒಲವು ತೋರಿಸಿತು. 1932ರಲ್ಲಿ ಮಹಾದೇವಿ ಕನ್ಯಾ ಪ್ರೌಢಶಾಲೆ ತೆರೆಯುವುದರ ಮುಖಾಂತರ ಮಹಿಳಾ ಶಿಕ್ಷಣಕ್ಕೆ ಲಿಂ. ಪರಮಪೂಜ್ಯ ದೊಡ್ಡಪ್ಪ ಅಪ್ಪಾ ಆವರು ಭದ್ರಬುನಾದಿ ಹಾಕಿದರು. ಅಲ್ಲದೆ ತಾವು ಸ್ಥಾಪಿಸಿದ ಇತರ ಶಾಲಾಕಾಲೇಜುಗಳಲ್ಲಿಯೂ ಕಲಿಯಲು ಅವಕಾಶ ಕಲ್ಪಿಸಿ ಕೊಟ್ಟರಲ್ಲದೆ. ಉದ್ಯೋಗಗಳನ್ನು ನೀಡಿ ಸದೃಢಗೊಳಿಸಿದರು.

ಅವರ ತರುವಾಯ ಪರಮಪೂಜ್ಯ ಡಾ॥ ಶರಣಬಸವಪ್ಪ ಅಪ್ಪಾ ಅವರಂತು ಮಹಿಳಾ ಶಿಕ್ಷಣದತ್ತ ವಿಶೇಷ ಗಮನ ಹರಿಸಿದ್ದಾರೆ. ಸ್ತ್ರೀಯರಿಗೆ ಹೆಚ್ಚಿನ ಉದ್ಯೋಗವಕಾಶಗಳನ್ನು ನೀಡುವುದರ ಮೂಲಕ ಅವಳನ್ನು ಆರ್ಥಿಕವಾಗಿ ಬಲಗೊಳಿಸಿ ಆ ಬಲದಿಂದ ಇತರ ಕ್ಷೇತ್ರಗಳಲ್ಲಿಯೂ ಬೆಳೆಯುವಂತೆ ಮಾಡಿ ಮಹಿಳಾ ಸಬಲೀಕರಣದ ಅಪ್ಪ ಎನಿಸಿದ್ದಾರೆ.

ಸುಮಾರು ನೂರಾಹನ್ನೊಂದು (111) ವರ್ಷಗಳ ಈ ಭದ್ರ ಸಂಸ್ಥೆಗೆ ಕಾರ್ಯದರ್ಶಿಗಳಾಗಿ, ಘನ ಅಧ್ಯಕ್ಷರಾಗಿ ಅರ್ಧಶತಮಾನಕ್ಕಿಂತ ಹೆಚ್ಚು ವರ್ಷ ಸೇವೆಸಲ್ಲಿಸುತ್ತಿರುವ ಪೂಜ್ಯರು ಮಹಿಳೆಯರಿಗೆ ಸಾಮಾಜಿಕ ಮಾನ್ಯತೆ ತಂದುಕೊಡುವಲ್ಲಿ ಶತಪ್ರಯತ್ನ ಗೈಯುತ್ತಿದ್ದಾರೆ. ಸಾಮಾನ್ಯ ಶಿಕ್ಷಣದೊಂದಿಗೆ ಇಂದಿನ ಆಧುನಿಕ ಯುಗಕ್ಕೆ ಎಂತಹ ಶಿಕ್ಷಣ ಅವಳಿಗೆಬೇಕು ಎಂಬುದನ್ನು ಅರಿತುಕೊಂಡು ಅ ಕಡೆಯತ್ತ ವಿಶೇಷ ಒಲವುತೋರಿಸುತ್ತಿದ್ದಾರೆ. ಮಹಿಳೆಯರಿಗಾಗಿಯೇ ಒಂದು ಇಂಜಿನಿಯರಿಂಗ್ ಕಾಲೇಜ ತೆರೆದ ಕೀರ್ತಿ ಅವರಿಗೆ ಸಲ್ಲುತ್ತದೆ. ಈ ಮಹಾವಿದ್ಯಾಲಯವು ಉತ್ತರ ಕರ್ನಾಟಕ ಪ್ರಥಮ ಮಹಿಳಾ ಇಂಜಿನಿಯರಿಂಗ್ ಕಾಲೇಜು ಎನಿಸಿದರೆ ಇಡೀ ಕರ್ನಾಟಕದಲ್ಲಿ ಎರಡನೇ ಮಹಿಳಾ ಇಂಜಿನಿಯರಿಂಗ ಕಾಲೇಜು ಎಂಬ ಹೆಸರು ಪಡೆದಿದೆ. ಅಲ್ಲದೆ ಈ ಕಾಲೇಜಿನಲ್ಲಿ ಮಹಿಳೆಯರಿಗಾಗಿಯೇ ಎಂ.ಬಿ.ಎ. ಮತ್ತು ಎಮ್.ಟೆಕ್ ಕೋರ್ಸುಗಳನ್ನು ಕಲಿಯಲು ಅವಕಾಶ ಮಾಡಿದ್ದಾರೆ. ಹೀಗೆ ಇಂದು ಇವರ ಸಂಸ್ಥಾನದಲ್ಲಿ ಮಹಿಳೆಯರು ಆಡಳಿತ ವಿಭಾಗದಿಂದ ಹಿಡಿದು ಕಲೆ. ವಿಜ್ಞಾನ, ವಾಣಿಜ್ಯ, ತಂತ್ರಜ್ಞಾನ, ಸಂಶೋಧನೆ ಕ್ರೀಡ್ರೆ ಮುಂತಾದ ಕ್ಷೇತ್ರಗಳಲ್ಲಿ ತ್ವರಿತಗತಿಯಿಂದ ಮುನ್ನಡೆಯುತ್ತಿದ್ದಾಳೆ.

ಈ ಸಂಸ್ಥೆಯಲ್ಲಿ ಮಹಿಳೆಯರಿಗಾಗಿಯೇ ಇರುವ ಕೆಲವು ಶಾಲಾ–ಕಾಲೇಜುಗಳು ಇಚಿತಿವೆ.

1) ಮಹಾದೇವಿ ಕನ್ಯಾ ಹಿರಿಯ ಪ್ರಾಥಮಿಕ ಶಾಲೆ
2) ಮಹಾದೇವಿ ಕನ್ಯಾ ಪ್ರೌಢಶಾಲೆ
3) ಗೋದುತಾಯಿ ದೊಡ್ಡಪ್ಪ ಅಪ್ಪಾ ಕಲಾ ಮತ್ತು ವಾಣಿಜ್ಯ ಪದವಿ ಪೂರ್ವ ಮಹಿಳಾ ಮಹಾವಿದ್ಯಾಲಯ.
4) ಗೋದುತಾಯಿ ದೊಡ್ಡಪ್ಪ ಅಪ್ಪಾ ಕಲಾ ಮತ್ತು ವಾಣಿಜ್ಯ ಮಹಿಳಾ ಪದವಿ ಮಹಾವಿದ್ಯಾಲಯ
5) ಮುಕ್ತಾಂಬಿಕಾ ಪದವಿ ಪೂರ್ವ ವಿಜ್ಞಾನ ಮಹಿಳಾ ಮಹಾವಿದ್ಯಾಲಯ
6) ಮುಕ್ತಾಂಬಿಕಾ ಬಿ. ಬಿ. ಎಂ. ಮಹಿಳಾ ಮಹಾವಿದ್ಯಾಲಯ
7) ಮುಕ್ತಾಂಬಿಕಾ ಬಿ. ಸಿ. ಎ. ಮಹಿಳಾ ಮಹಾವಿದ್ಯಾಲಯ
8) ಗೋದುತಾಯಿ ಬಿ. ಎಡ್. ಮಹಿಳಾ ಮಹಾವಿದ್ಯಾಲಯ
9) ಗೋದುತಾಯಿ ತಾಂತ್ರಿಕ ಮಹಿಳಾ ಮಹಾವಿದ್ಯಾಲಯ
10) ಗೋದುತಾಯಿ ಡಿ. ಎಡ್. ಮಹಿಳಾ ಮಹಾವಿದ್ಯಾಲಯ
11) ಕೋಮಲಾ ತಾಯಿ ಸ್ವತಂತ್ರ ಪದವಿ ಪೂರ್ವ ಮಹಿಳಾ ಮಹಾವಿದ್ಯಾಲಯ ಬಸವಕಲ್ಯಾಣ

ಅಲ್ಲದೆ ತಮ್ಮ ಇತರ ಶಿಕ್ಷಣ ಸಂಸ್ಥೆಗಳಲ್ಲಿ ಪುರುಷರೊಂದಿಗೆ ಸ್ತ್ರೀಯರಿಗೂ ಕಲಿಯಲು ಮತ್ತು ಕಲಿಸಲು ಅವಕಾಶ ಕಲ್ಪಿಸಿದ್ದಾರೆ. ಮೇಲಿನ ಈ ವಿದ್ಯಾ ಸಂಸ್ಥೆಗಳಲ್ಲಿ ಪ್ರತಿಶತ 99% ಮಹಿಳಾ ಶಿಕ್ಷಕರೆ ಇದ್ದಾರೆ. ಹೀಗಾಗಿ ಶರಣಬಸವೇಶ್ವರ ವಿದ್ಯಾವರ್ಧಕ ಸಂಸ್ಥೆಯಲ್ಲಿ 'ಉದ್ಯೋಗಂ ಪುರುಷ ಲಕ್ಷಣಂ' ಎಂಬ ಸಂಪ್ರದಾಯದ ನುಡಿ ಹಿಂದೆ ಬಿದ್ದು 'ಉದ್ಯೋಗಂ ಸ್ತ್ರೀ ಪುರುಷರ ಲಕ್ಷಣಂ'–ಎಂಬಂತಾಗಿದೆ.

ಪೂಜ್ಯ ಅಪ್ಪಾಜಿಯವರು ಸ್ತ್ರೀ ಸಬಲೀಕರಣಕ್ಕಾಗಿ ಈ ಕೆಳ ಪ್ರಮುಖ ಅಂಶಗಳಿಗೆ ಒತ್ತು ಕೊಟ್ಟಿದ್ದಾರೆ.

1) ಸ್ತ್ರೀಯರ ಪ್ರಖರ ಜ್ಞಾನಕ್ಕೆ ಶರಣಬಸವೇಶ್ವರ ವಿದ್ಯಾವರ್ಧಕ ಸಂಘ ಜೀವಂತ ಪ್ರಯೋಗ ಶಾಲೆಯನ್ನಾಗಿಸಿದ್ದಾರೆ.
2) ಸ್ತ್ರೀಯರಿಗೆ ಶೈಕ್ಷಣಿಕ ಅರಿವುಕೊಟ್ಟು ಅವಳಲ್ಲಿ ಸ್ವಾಭಿಮಾನ ಮೂಡಿಸಿ ಅವರ ವ್ಯಕ್ತಿತ್ವ ರೂಪಿಸಿದ್ದಾರೆ.
3) ಸ್ತ್ರೀಯು ಕನಿಷ್ಕಳು ಎಂಬುದನ್ನು ದೂರತಳ್ಳಿ, ಲಿಂಗಭೇದ ಮಾಡದೆ ಬಸವಾದಿ ಶಿವಶರಣರಂತೆ ಶಿವತ್ವವನ್ನು ಪಡೆಯಲು ಅರ್ಹಳೆಂದು ಹೇಳಿ ಸ್ತ್ರೀಯರ ಆತ್ಮಬಲ ಹೆಚ್ಚಿಸಿದ್ದಾರೆ.
4) ಹೊಸ ಸಮಾಜ ನಿರ್ಮಾಣದಲ್ಲಿ ಮಹಿಳೆಯರ ಪಾಲುಕೂಡಾ ಇದೆಯೆಂದು ಹೇಳಿ ಅದರ ಹೊಣೆಗಾರಿಕೆಯ ಅರಿವು ಮಾಡಿಸಿದ್ದಾರೆ.
5) ಸ್ವತಂತ್ರವಾಗಿ ಓದಬೇಕು, ಸ್ವತಂತ್ರವಾಗಿ ಬರೆಯಬೇಕು, ಸ್ವತಂತ್ರವಾಗಿ ಮಾತನಾಡಬೇಕು ಎಂಬ ತಮ್ಮ ವಿಚಾರ ಧಾರೆಯಲ್ಲಿ ಮಹಿಳೆಯರ ವ್ಯಕ್ತಿತ್ವ ರೂಪಿಸಿದ್ದಾರೆ.
6) ಸಂಶೋಧನಾ ಕೇಂದ್ರಗಳನ್ನು ತಮ್ಮ ಸಂಸ್ಥೆಗಳಲ್ಲಿ ತೆರೆದು ಸಂಶೋಧನೆಯತ್ತ ಸ್ತ್ರೀಯರನ್ನು ಚಿಂತನೆಗೆ ಹಚ್ಚುತ್ತಿದ್ದಾರೆ.
7) ಸ್ತ್ರೀಯರಿಗೆ ಪುಸ್ತಕಗಳನ್ನು ಬರೆಯಲು ಮತ್ತು ಲೇಖನಗಳನ್ನು ಬರೆಯಲು ಹೇಳಿ ಸ್ಪರ್ಧಾತ್ಮಕ ಲೋಕದತ್ತ ಸಾಗಿಸುತ್ತಿದ್ದಾರೆ.
8) ಸಂಗೀತ, ಚಿತ್ರಕಲೆ ಮತ್ತು ಶಿಲ್ಪಕಲೆಯತ್ತ ಸ್ತ್ರೀಯರ ಒಲವು ಹೆಚ್ಚಿಸುತ್ತಿದ್ದಾರೆ.
9) ಕ್ರೀಡೆ ಮತ್ತು ಆರೋಗ್ಯದ ಕುರಿತು ಮಹಿಳೆಯರನ್ನು ಜಾಗ್ರತಗೊಳಿಸುತ್ತಿದ್ದಾರೆ.
10) ತಮ್ಮ ಮಾರ್ಗದರ್ಶನದಲ್ಲಿ ಮಹಿಳೆಯರಿಗೆ ಆಡಳಿತದ ಅನುಭವ ನೀಡಿದ್ದಾರೆ.
11) ಗ್ರಾಮೀಣ ಮತ್ತು ರೈತಾಪಿ ಕುಟುಂಬದಿಂದ ವಿದ್ಯಾರ್ಥಿನಿಯರಿಗೆ ವಿಶೇಷವಾಗಿ ಇಂಗ್ಲೀಷ ಮತ್ತು ಕಂಪ್ಯೂಟರ್ ಜ್ಞಾನ ಕೊಡುವ ವ್ಯವಸ್ಥೆ ಮಾಡಿದ್ದಾರೆ. ಅಂತಹ ವಿದ್ಯಾರ್ಥಿನಿಯರಿಗೆ ಫ್ರೀ ಶಿಕ್ಷಣಕ್ಕೂ ಅವಕಾಶ ಕಲ್ಪಿಸಿದ್ದಾರೆ.
12) ಮಹಿಳೆಯರ ಸಂವೇದನೆಗಳನ್ನು ಅರಿತುಕೊಂಡ ಪೂಜ್ಯರು ಅವಳ ಮೇಲಾಗುವ ದಬ್ಬಾಳಿಕೆಗೆ ಯಾವಾಗಲೂ ವಿರೋಧವಾಗಿದ್ದಾರೆ. ವಿವಾಹ ವಿಚ್ಚೇದನೆ ಮಾಡಿಕೊಳ್ಳಬೇಕೆನ್ನುವ ಅದೆಷ್ಟು ದಂಪತಿಗಳು ಪೂಜ್ಯರ ಕೃಪೆ ಒಳ್ಳೆಯ ದಂಪತಿಗಳಾಗಿ ಬದುಕುತ್ತಿದ್ದಾರೆ.

ವಿಜ್ಞಾನ, ತಂತ್ರಜ್ಞಾನ ಮತ್ತು ಸಂಶೋಧನೆಗಳು ಇಂದಿನ ಆಧುನಿಕ ಮಾನವನ ಪ್ರಮುಖ ಅಧ್ಯಯನ ಕ್ಷೇತ್ರಗಳಾಗಿವೆ. ಅಪ್ಪಾ ಅವರು ತಮ್ಮ ಸಂಸ್ಥೆಗಳಲ್ಲಿ ಇವುಗಳಿಗೆ ಹೆಚ್ಚು ಒತ್ತುಕೊಟ್ಟಿದ್ದಾರಲ್ಲದ ಮಹಿಳೆಯರಿಂಗ್ ವಿಶೇಷ ಕಲಿಯುವ ಸೌಲಭ್ಯ ಕಲ್ಪಿಸಿದ್ದಾರೆ. ಇಂಜಿನಿಯರಿಂಗ್, ಮೆಡಿಕಲ್, ಅಗ್ರಿಕಲ್ಚರ್, ಡೆಂಟಲ್. ಮುಂತಾದ ಸೀಟುಗಳನ್ನು ಪಡೆಯುವಲ್ಲಿ ನಮ್ಮ ಸಂಸ್ಥೆಯ ವಿದ್ಯಾರ್ಥಿನಿಯರು ಮೇಲುಗೈ ಸಾಧಿಸಿದ್ದಾರೆ. ಎಂ.ಎ., ಎಂ.ಕಾಂ, ಎಮ್.ಎಸ್ಸಿ. ಸಿ.ಎ. ಎಮ್.ಟೆಕ್, ಎಮ್.ಬಿ.ಎ., ಮತ್ತು ಎಮ್.ಸಿ.ಎ., ಮುಂತಾದ ಸೀಟುಗಳನ್ನು ವಿಶ್ವವಿದ್ಯಾಲಯ ಮಟ್ಟದಲ್ಲಿ ಫ್ರೀಯಾಗಿ ಪಡೆಯುತ್ತಿದ್ದಾರೆ. ಕೆಲವು ವಿದ್ಯಾರ್ಥಿನಿಯರು ಸ್ಪರ್ಧಾತ್ಮಕ ಪರೀಕ್ಷೆಯತ್ತ ಒಲವು ತೋರಿದ್ದಾರೆ.

ಪೂಜ್ಯರ ಮಾರ್ಗದರ್ಶನದ ಮೇರೆಗೆ ಅನೇಕ ಮಹಿಳೆಯರು ಎಮ್.ಫಿಲ್. ಮತ್ತು ಪಿ.ಹೆಚ್‌ಡಿ ಪದವಿ ಪಡೆದಿದ್ದಾರೆ. ಪಡೆಯುತ್ತಿದ್ದಾರೆ. ಯು.ಜಿ.ಸಿ. ಮತ್ತು ಇತರ ಸಂಸ್ಥೆಗಳ ಹಣಕಾಸಿನ ನೆರವಿನೊಂದಿಗೆ ಬ್ರಹತ ಮತ್ತು ಕಿರಿಯ ಸಂಶೋಧನೆಗಳನ್ನು ಮಾಡಲು ಪ್ರೇರಣೆ ಒದಗಿಸಿದ್ದಾರೆ.

ಮಹಿಳೆಯರಿಗೆ ಪುಸ್ತಕಗಳನ್ನು ಮತ್ತು ಲೇಖನಗಳನ್ನು ಬರೆಯುವಲ್ಲಿ ಉತ್ಸಾಹ ಮೂಡಿಸುತ್ತಿದ್ದಾರೆ. ಪಠ್ಯಕ್ಕೆ ಸಂಬಂಧಿಸಿದಂತೆ ಮತ್ತು ಇತರ ವಿಷಯಗಳ ಕುರಿತು ಮೌಲಿಕವಾದ ಕೃತಿಗಳನ್ನು ಈ ಸಂಸ್ಥೆಯ ಮಹಿಳೆಯರು ಹೊರತಂದಿದ್ದಾರೆ. ಈ ಎಲ್ಲಾ ಕೃತಿಗಳಿಗೆ ಆಶೀರ್ವಾದ ಬರೆದು ಅವರನ್ನು ಗೌರವಿಸುವ ಪೂಜ್ಯರ ದೂರದೃಷ್ಟಿ ಗಮನಿಸುವಂತಹದು.

ಕೇವಲ ಮಹಿಳೆ ವರ್ಗಗಳಲ್ಲಿ ಮಾತನಾಡಿದರೆ ಸಾಲದು ತನ್ನ ತಾಕತ್ತು ಸಮಾಜಕ್ಕೆ ತೋರಬೇಕಾದರೆ ವೇದಿಕೆಯ ಮೇಲೆ ನಿರ್ಭಯವಾಗಿ ಮಾತನಾಡಬೇಕು ಎಂದು ಹೇಳಿ ತಮ್ಮ ಅಖಿಲ ಭಾರತ ಅನುಭವ ಮಂಟಪದ ವೇದಿಕೆಯಲ್ಲಿ ಮುಕ್ತ ಅವಕಾಶ ಕಲ್ಪಿಸಿದ್ದಾರೆ. ಅವರೇ ಹೇಳುವಂತೆ ಇಂದು ಸಂಸ್ಥೆಯಲ್ಲಿ ಮೂವತ್ತಕ್ಕಿಂತ ಹೆಚ್ಚು ಮಹಿಳೆಯರು ಮಾತನಾಡುವ ಕಲೆ ಬೆಳೆಯಿಸಿಕೊಂಡಿದ್ದಾರೆ.

ವೈಜ್ಞಾನಿಕ ಲೋಕದತ್ತ ಪೂಜ್ಯರು ತಮ್ಮ ಚಿತ್ತವನ್ನಿರಿಸಿದ್ದರೂ ಸಾಂಸ್ಕೃತಿಕ ಪರಂಪರೆಯನ್ನು ಮುನ್ನಡಿಸಿ ಅದನ್ನು ಪುನರ್ ಜೀವನಗೊಳಿಸಿದ್ದಾರೆ. ಸಂಗೀತ ಚಿತ್ರಕಲೆ, ಶಿಲ್ಪಕಲೆ, ಶಾಸನಾಧ್ಯಯನ ಹಸ್ತಪ್ರತಿಗಳ ಸಂಗ್ರಹ ಈ ಮೊದಲಾದ ಕ್ಷೇತ್ರಗಳತ್ತವು ಮಹಿಳೆಯರ ಆಸಕ್ತಿಯನ್ನು ಹೆಚ್ಚಿಸುತ್ತಿದ್ದಾರೆ. ಹೀಗೆ ಪರಮಪೂಜ್ಯ ಡಾ॥ ಶರಣಬಸವಪ್ಪ ಅಪ್ಪಾ ಅವರು ಪರಿವರ್ತನಾ ಶೀಲ ಸಮಾಜ ನಿರ್ಮಾಣಕ್ಕಾಗಿ ಮಹಿಳೆಗೆ ನೀಡಬೇಕಾದ ಪ್ರೇರಣೆ ಪ್ರೋತ್ಸಾಹ ಮಾರ್ಗದರ್ಶನ ನೀಡಿ ಅವಳನ್ನು ಸಬಲೀಕರಣಗೊಳಿಸಿ ಈ ಭಾಗವನ್ನು ಸುಭದ್ರಗೊಳಿಸಿದ್ದಾರೆ.

## REFERENCES

1) Shri Sharanabasveshwar Leelambrut By: Dr. L.Basavaraju. | 2) Sharanabasveshwararu Hagu Awar Parisarada Sahitya By: Dr. S.M. Hiremath.| 3) Mahadasohi Doddappa Appa By: Dr. (Mrs.) Neelambika Policepatil. | 4) Mahadasoha Drasthar By: Dr. S.M. Hiremath.